ಅಧ್ಯಕ್ಷರು: ತಾವು ಕುಳಿತುಕೊಳ್ಳಿ, ನಮಗೆ ಸಮಯವಿಲ್ಲ ತಾವು ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಿಲ್ಲ ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಇದರಿಂದ ಬಹಳ ತೊಂದರೆಯಾಗುತ್ತಿದೆ. ಬೈಕಿನಲ್ಲಿ ಬರುವವರಿಗೆ ಕಣ್ಣಿಗೆ ಮರಳು ಹಾರಿ ತೊಂದರೆಯಾಗುತ್ತಿದೆ.

ಅಧ್ಯಕ್ಷರು: ಇದು ಗೊತ್ತಿದೆ, ಆದರೆ ತಾವು ಕುಳಿತುಕೊಳ್ಳಿ.

ಐಎಎಸ್, ಐಪಿಎಸ್ ಸಮಾನ ಹುದ್ದೆಯಲ್ಲಿರುವ ಅಧಿಕಾರಿಗಳು ಒಂದಕ್ಕಿಂತ ಹೆಚ್ಚು ನಿವೇಶನಗಳನ್ನು ಹೊಂದಿರುವುದರ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 89(1472)

**ಸದಸ್ಯರ ಹೆಸರು: ಶ್ರೀ ಎನ್.ಸಂಪಂಗಿ(ಬಾಗೇಪಲ್ಲಿ)**

## ಪ್ರಶ್ನೆ

1) ಯಾವ ಯಾವ ಐಎಎಸ್, ಐಪಿಎಸ್, ಐಎಫ್ಎಸ್ ಮತ್ತು ಕೆಎಎಸ್ ಅಧಿಕಾರಿಗಳಿಗೆ ಬೆಂಗಳೂರು ನಗರ ಮತ್ತು ಇತರೇ ನಗರಗಳಲ್ಲಿ ಒಂದಕ್ಕಿಂತ ಹೆಚ್ಚು ನಿವೇಶನಗಳಿವೆ? (ಅಂತಹ ಅಧಿಕಾರಿಗಳ ಹೆಸರುಗಳನ್ನು ನೀಡುವುದು)

2) ಒಂದಕ್ಕಿಂತ ಹೆಚ್ಚು ನಿವೇಶನ ಹೊಂದಿರುವ ಇಂತಹ ಅಧಿಕಾರಿಗಳಿಗೆ ಸರ್ಕಾರದಿಂದ ನೋಟೀಸ್ ನೀಡಿರುವುದು ನಿಜವೇ?

3) ನೋಟೀಸ್ ನಂತರವೂ ಸಂಬಂಧಪಟ್ಟ ಅಧಿಕಾರಿಗಳು ಉತ್ತರ ನೀಡದೇ ಇರುವುದು ನಿಜವೇ? ಉತ್ತರ ನೀಡದೇ ಇರುವ ಅಧಿಕಾರಿಗಳ ಹೆಸರುಗಳನ್ನು ನೀಡುವುದು ಮತ್ತು ಈ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು?

**ಉತ್ತರಿಸುವ ಮಂತ್ರಿಗಳು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿಗಳು)**

## ಉತ್ತರ

1) ಸರ್ಕಾರದ ಸುತ್ತೋಲೆ ಸಂಖ್ಯೆ:ಡಿಪಿಎಆರ್ 261 ಎಸ್ಎಂಇ 99 ದಿನಾಂಕ: 5-11-99ರನ್ವಯ ಸರ್ಕಾರಿ ಅಧಿಕಾರಿಗಳ : ನೌಕರರು ಸರ್ಕಾರದ ಏಜನ್ಸಿಗಳಾದಂತಹ ಕರ್ನಾಟಕ ಹೌಸಿಂಗ್ ಬೋರ್ಡ್, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ಗೃಹ ನಿರ್ಮಾಣ

ಸಹಕಾರ ಸಂಘಗಳ ಮೂಲಕ ಒಂದಕ್ಕಿಂತ ಹೆಚ್ಚು ನಿವೇಶನಗಳನ್ನು ಸಬ್‌ಸಿಡೈಸ್ಡ್ ರೂಪದಲ್ಲಿ ಹೊಂದುವಂತಿಲ್ಲ. ಅಲ್ಲದೆ ಸರ್ಕಾರಿ ಅಧಿಕಾರಿಗಳು : ನೌಕರರುಗಳು ನಿವೇಶನ ಹೊಂದುವ ಉದ್ದೇಶಕ್ಕಾಗಿ ಒಂದಕ್ಕಿಂತ ಹೆಚ್ಚು ಗೃಹ ನಿರ್ಮಾಣ ಸಹಕಾರ ಸಂಘಗಳ ಸದಸ್ಯತ್ವ ಪಡೆಯುವಂತಿಲ್ಲ. ಸರ್ಕಾರದಲ್ಲಿ ಲಭ್ಯವಿರುವ ಮಾಹಿತಿ ಪ್ರಕಾರ ಸರ್ಕಾರದ ಏಜೆನ್ಸಿಗಳ ಮೂಲಕ ರಿಯಾಯಿತಿ ದರದಲ್ಲಿ ಬೆಂಗಳೂರು ನಗರ ಹಾಗೂ ಇತರೆ ನಗರಗಳಲ್ಲಿ ಒಂದಕ್ಕಿಂತ ಹೆಚ್ಚು ನಿವೇಶನಗಳನ್ನು ಹೊಂದಿರುವ ಅಧಿಕಾರಿಗಳ ಹೆಸರುಗಳನ್ನು ಅನುಬಂಧ-1ರಲ್ಲಿ ತೋರಿಸಲಾಗಿದೆ. ಹಾಗೂ ಪಿತ್ರಾರ್ಜಿತವಾಗಿ ಬಂದ ನಿವೇಶನಗಳನ್ನು ಒಳಗೊಂಡಂತೆ ಒಂದಕ್ಕಿಂತ ಹೆಚ್ಚು ನಿವೇಶನಗಳನ್ನು ಹೊಂದಿರುವ ಅಧಿಕಾರಿಗಳ ಹೆಸರುಗಳನ್ನು ಅನುಬಂಧ-2ರಲ್ಲಿ ತೋರಿಸಲಾಗಿದೆ.

2) ಸರ್ಕಾರಿ ಏಜೆನ್ಸಿಗಳ ಮೂಲಕ ಒಂದಕ್ಕಿಂತ ಹೆಚ್ಚು ನಿವೇಶನ ಖರೀದಿಸಿರುವ ಅಧಿಕಾರಿಗಳಿಗೆ ನೋಟೀಸುಗಳನ್ನು ನೀಡಲಾಗಿದೆ.

3) ನೋಟೀಸ್ ನೀಡಿದ ನಂತರ ಕೆಲವು ಅಧಿಕಾರಿಗಳು ಸರ್ಕಾರಕ್ಕೆ ಉತ್ತರ ನೀಡಿದ್ದಾರೆ. ಇದರಲ್ಲಿ ಕೆಲವು ಈಗಾಗಲೇ ಹೆಚ್ಚಿನ ನಿವೇಶನವನ್ನು ಹಿಂದಿರುಗಿಸಿದ್ದಾರೆ. ಹಾಗೂ ಇನ್ನೂ ಕೆಲವರು ಅಂತಹ ಹೆಚ್ಚುವರಿ ನಿವೇಶನವನ್ನು ಹಿಂದಿರುಗಿಸುವುದಾಗಿ ತಿಳಿಸಿದ್ದಾರೆ. (ಅವರ ಹೆಸರುಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ). ನಂತರ ಉಳಿದ ಅಧಿಕಾರಿಗಳು ನೀಡಿದ ಉತ್ತರವು ಸರ್ಕಾರದ ಪರಿಶೀಲನೆಯಲ್ಲಿದೆ. ಶ್ರೀ ಟಿ.ಡಿ.ಅಭಯ ಕುಮಾರ್ ಕೆಎಎಸ್ ಅವರು ನೋಟೀಸಿಗೆ ಉತ್ತರ ನೀಡದ ಕಾರಣ ಇವರ ಮೇಲೆ ಶಿಸ್ತು ಕ್ರಮವನ್ನು ಜರುಗಿಸಲಾಗುತ್ತಿದೆ.

ಅನುಬಂಧ-I

LIST OF OFFICERS WHO POSSESS MORE THAN ONE SITE IN BANGALORE CITY AND OTHER CITIES OBTAINED FROM GOVERNMENT AGENCIES

| IAS OFFICERS Sriyuths | IPS OFFICERS Sriyuths | IFS OFFICERS Sriyuths |
|---|---|---|
| K.H.Gopalakrishnagowda | A.G.Ayachit | A.M.Annaiah |
| Gonal Bhimappa | S.M.Bidari | S.M.Chelawadi |
| S.L.Gangadharappa | C.Chandrashekar | Dr.C.D.Dyavaiah |
| P.Kotilingangoud | Gopal B.Hosur | V.P.Hiremath |
| M.K.Shankaralingagowda | H.R.Kasturi Rangan | B.J.Hosmath |
| A.S.Srikanth | M.Lakshman | M.R.Karki |
| Dr.S.Subramanya | H.C.Kishore Chandra | Kanwarpal |
| Sadashivaiah | B.G.Kokatnur | M.V.Mulimani |
| | K.S.Mendegar | S.Nagaraja |
| | J.Nisar Ahmed | B.B.Nadagowdar |
| | K.G.Motiram | Nagara |
| | S.S.Masali | H.P.Prakash |
| | Y.R.Patil | S.Rajanna |
| | M.R.Pujar | S.M.Puttabuddhi |
| | Praveen Sood | Rangegowda |
| | K.S.Suresh Babu | Dr.S.N.Rai |
| | K.L.Sudheer | C.K.Shivanna |
| | B.G.J.Mirji | H.G.Shivananda Murthy |
| | | K.Sundar Naik |
| | | B.Shivanagowda |
| | | D.A.Venkatesh |
| | | S.Venugopal |
| | | S.K.Ramalinge Gowda |

K.A.S. OFFICERS
Sriyuths

1) K.Mariyappa

2) V.V.Sajjan

3) K.N.Krishnamurthy

4) J.R.Lobo

5) K.D.Birje

6) Gongada Shetty

7) S.L.Manjunatha

8) Naganayak

9) Panduranga Bhayya

10) C.H.Prabhudev

11) S.G.Patil

12) J.B.Sadare

13) N.R.Subbarao

14) N.M.Panali

15) Jitendra Nayak

16) J.H.Kantha

17) A.N.Patil

18) K.S.Raikar

19) Naganatha Malige

20) S.K.Lakshman

21) Mohamed Khaleemulla

22) M.R.Hiremath

23) S.R.Venkatsh

24) T.D.Abhayakumar

25) K.S.Suryanarayana Rao

ಅನುಬಂಧ-2

LIST OF OFFICERS WHO POSSESS MORE THAN ONE SITE IN BANGALORE AND OTHER CITIES ACQUIRED FROM INHERITED AND FROM NON-GOVERNMENTAL AGENCIES / PRIVATE PARTY

| IAS OFFICERS Sriyuths | IPS OFFICERS Sriyuths | IFS OFFICERS Sriyuths |
|---|---|---|
| K.H.Aswathanarayana gowda | R.H.Auradkar | K.S.Aralikatti |
| Dr.H.Baskar | Bipin Gopalkrishna | S.M.Chelawadi |
| Dr.S.M.Jaamdar | S.N.Borkar | M.N.Jayakumar |
| A.K.Monnappa | T.G.Doraswamy Naik | Nagaraja Hampole |
| Dr.H.V.Parshwanath | T.Jayaprakash | S.Shekhar |
| Siddaiah | K.S.Mandegar | G.A.Sudarshan |
| M.Lakshminarayana | S.S.Masali | B.Chikkappayya |
| B.N.Ramaprasad | K.C.Ramamurthy | Ashok B.Basarkod |
| C.Chikkanna | B.G.J.Mirji | A.M.Annaiah |
| Vijay Gore | N.R.Nadamani | A.M.Annaiah |
| D.V.Prasad | Basker Rao | S.Venugopal |
| G.N.Nayak | Chandrashekhara | M.R.Karki |
| | M.R.Pujar | H.P.Prakash |
| | Sureshkunhi Mohammad | M.H.Shaik |

K.A.S. OFFICERS
Sriyuths

1) A.L.Ranganath

2) K.C.Shivashankar

3) A.M.Goni

4) M.Doddappa

5) N.Ramakrishna

6) K.S.Suryanarayana Rao

7) V.Ashok

8) M.Abdul Jabbar

9) K.Krishnegowda

10) V.B.Hiregowdar

11) H.Raghupathi

12) K.A.Thippeswamy

13) M.S.Chinnappa Gowder

14) K.C.Sriramaiah

15) Syed Abdul Rub

16) S.Varadarajaiah

17) U.S.Nejjur

18) V.M.Kulkarni

19) N.Devakumari

20) H.Shama Rao

21) V.V.Puned

22) S.Krishna

23) V.G.Divakar

24) B.S.Bidarimath

25) R.D.Pattar

26) S.Basappa

27) N.R.Sudhakar

28) Habibulla

29) H.T.Chandrashekar

30) K.H.Narasimhamurthy

32) B.Ramu

33) A.R.Panduranga

ಅನುಬಂಧ-3

LIST OF OFFICERS WHO HAVE SURRENDERED/INFORMED THAT THEY ARE SURRENDING ONE SITE AS PER NOTICE ISSUED TO THEM

| IAS OFFICERS Sriyuths | IPS OFFICERS Sriyuths | IFS OFFICERS Sriyuths |
|---|---|---|
| R.B.Agawane - Surrendered | 1.N.R.Nadamani - Surrendered | 1. Dr.S.N.Rai - Surrendered |
| | 2.K.L.Sudheer - Being Surrendered | 2. M.Nagaraja Hampole - Surrendered |
| | | 3. G.A.Sudharshan - Surrendered |

| K.A.S. OFFICERS |
|---|
| Sri K.S.Suryanarayana Rao - Surrendered |

ಶ್ರೀ ಎನ್.ಸಂಪಂಗಿ: ಮಾನ್ಯ ಅಧ್ಯಕ್ಷರೆ, ಯಾವ್ಯಾವ ಐಎಎಸ್, ಐಪಿಎಸ್, ಐಎಫ್ಎಸ್, ಕೆ.ಎ.ಎಸ್ ಅಧಿಕಾರಿಗಳು ಒಂದಕ್ಕಿಂತ ಹೆಚ್ಚು ನಿವೇಶನಗಳನ್ನು ಹೊಂದಿದ್ದಾರೆ ಎಂದು ನಾನು ಪ್ರಶ್ನೆ ಕೇಳಿದ್ದೆ. ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಆದರೆ ನಿವೇಶನಗಳನ್ನು ಹೊಂದುವ ಬಗ್ಗೆ ಸರ್ಕಾರದಿಂದ ಏನು ನಿರ್ಬಂಧ ಹೇರಲಾಗಿದೆ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ತಿಳಿಸಬೇಕಾಗಿ ವಿನಂತಿಸುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, 1999ರ ನವೆಂಬರ್ ತಿಂಗಳಿನಲ್ಲಿ Instructions for acquiring Sites by Karnataka Government Servants, including Officers of All India Services, ಎನ್ನತಕ್ಕಂಥ ಒಂದು ಸುತ್ತೋಲೆಯನ್ನು ನಾವು ಹೊರಡಿಸಿದ್ದೇವೆ. ಅದರ ಪ್ರಕಾರ ಮೊಟ್ಟಮೊದಲನೆಯದಾಗಿ ಸರ್ಕಾರದ ಅಧಿಕಾರಿಗಳು ಹೊಂದಿರತಕ್ಕ ನಿವೇಶನಗಳ ಬಗ್ಗೆ ಮಾಹಿತಿಯನ್ನು ಸಂಗ್ರಹ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇದರ ಜೊತೆಗೆ ಕೊ-ಆಪರೇಟಿವ್ ಸೊಸೈಟಿಗಳ ಮೂಲಕ ನಿವೇಶನಗಳನ್ನು ಸರ್ಕಾರಿ ಅಧಿಕಾರಿಗಳು ಪಡೆಯುವಂಥ ವಿಚಾರದಲ್ಲಿ ಕೆಲವು ನಿರ್ಬಂಧಗಳಿವೆ. ಅದರನ್ವಯ ಒಂದಕ್ಕಿಂತ ಹೆಚ್ಚು ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಅಧಿಕಾರಿಗಳು ನಿವೇಶನವನ್ನು ಹೊಂದುವುದಕ್ಕೆ ನಿರ್ಬಂಧವಿದೆ. 1999ನೇ ಇಸವಿಯ ಈ ಸುತ್ತೋಲೆ ಜಾರಿಗೆ ಬಂದ ಮೇಲೆ ಯಾರು ಅಧಿಕಾರಿಗಳು ಎರಡು ನಿವೇಶನಗಳನ್ನು ಪಡೆದಿದ್ದಾರೆ ಅವರಿಗೆ ನೋಟೀಸನ್ನು ಕೊಟ್ಟಿದ್ದೇವೆ, ಅವರಿಂದ ಸಮಜಾಯಿಷಿಯನ್ನು ಪಡೆದಿದ್ದೇವೆ. ಆದರೆ 1999ಕ್ಕಿಂತ ಮೊದಲು ಕೆಲವು ಅಧಿಕಾರಿಗಳು 1992ರಲ್ಲಿ, ಕೆಲವು ಅಧಿಕಾರಿಗಳು 1993ರಲ್ಲಿ ಅರ್ಜಿಯನ್ನು ಕೊಟ್ಟ ದಿವಸಗಳಿಂದ ಕೆಲವು ಅಧಿಕಾರಿಗಳಿಗೆ ನಿವೇಶನಗಳು ಮಂಜೂರಾಗಿದೆ. ಅದನ್ನೆಲ್ಲವನ್ನೂ ಕೂಡ ತಮ್ಮ ಪರಿಶೀಲನೆಗೆ ಇಟ್ಟಿದ್ದೇನೆ.

ಶ್ರೀ ಎನ್.ಸಂಪಂಗಿ: ಐ.ಎ.ಎಸ್., ಕೆ.ಎ.ಎಸ್. ಮತ್ತು ಐ.ಎಫ್.ಎಸ್. ಅಧಿಕಾರಿಗಳು ಇವರೆಲ್ಲರೂ ಸೇರಿ 74 ಜನರಿಗೆ ಸರ್ಕಾರದಿಂದ ನಿವೇಶನವನ್ನು ಕೊಟ್ಟಿದ್ದೀರಿ ಮತ್ತು ಪಿತ್ರಾರ್ಜಿತ ನಿವೇಶನಗಳೆಂದು ಸುಮಾರು 72 ಜನ ಅಧಿಕಾರಿಗಳಿಗೆ ಕೊಟ್ಟಿದ್ದೀರಿ. ಅಂದರೆ ಇಷ್ಟು ಜನ ಅಧಿಕಾರಿಗಳಿಗೂ ಒಂದಕ್ಕಿಂತ ಎರಡು ನಿವೇಶನಗಳು ಇವೆ ಎಂಬುದು ತೀರ್ಮಾನವಾಗಿದೆ. ತಾವು ಇವರುಗಳಿಗೆ ನೋಟೀಸ್ ಕೂಡ ಕೊಟ್ಟಿದ್ದೀರಿ. ಆ ನೋಟೀಸಿಗೆ ಉತ್ತರ ಕೊಡದೇ ಇರುವಂಥ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಆಮೇಲೆ, ಮತ್ತೊಂದು ಪ್ರಮಾಣಪತ್ರವನ್ನು ನೀಡದೆ ಇವರಿಗೆ ನಿವೇಶನಗಳನ್ನು ಕೊಟ್ಟಿದ್ದೀರಾ?

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೇ, ಕೆಲವೊಂದು ಪಟ್ಟಣಗಳಲ್ಲಿ ಏನು ಸೈಟುಗಳನ್ನು ಹಂಚುತ್ತಾರೆ, ಉದಾಹರಣೆಗೆ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ಕೊಡತಕ್ಕಂತಹ ನಿವೇಶನಗಳಲ್ಲಿ ಸಬ್ಸಿಡಿ ಎಲಿಮೆಂಟೇ ಇಲ್ಲ. 20-30 ಅಡಿ ಸೈಟುಗಳನ್ನು ಏನು ಕೊಡುತ್ತಾರೆ, ಅದರಲ್ಲಿ ಸಬ್ಸಿಡಿ ಎಲಿಮೆಂಟ್ ಇರುತ್ತದೆ. ಆದರೆ, ದೊಡ್ಡ ಸೈಟುಗಳು, 40-60,

50-90 ಅಥವಾ ಯಾವುದು ಗ್ರೇಡ್‌ವಾರು ಮೇಲಕ್ಕೆ ಹೋಗುತ್ತವೆ ಅದರಲ್ಲಿ ಸಬ್ಸಿಡಿ ಎಲಿಮೆಂಟ್ ಇಲ್ಲ. ಪ್ರಾಫಿಟ್ ಎಲಿಮೆಂಟ್ ಇದೆ. ಬಿ.ಡಿ.ಎ.ನವರು ಒಂದು ಲಾಭಾಂಶವನ್ನು ಏನು ದರ ನಿಗದಿ ಮಾಡುತ್ತಾರೆ ಅಬರಲ್ಲಿ ಅಳವಡಿಸಲಾಗುತ್ತದೆ. ಮತ್ತು ಎಲ್ಲಾ ಕಂಪ್ಯೂಟರೈಸ್ಡ್ ಆಗುತ್ತದೆ. ಕೆಲವು ಕೆಟಗರಿಗಳಿಗೆ ರಿಸರ್ವೇಷನ್ಸ್ ಮಾಡಿರತಕ್ಕಂಥಾದ್ದು ಮತ್ತು ಆ ಕೆಟಗರಿಗಳ ಚೌಕಟ್ಟಿನಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತೇವೆ. ಈಗಾಗಲೇ ಕೆಲವರಿಗೆ ನೋಟೀಸುಗಳನ್ನು ಕೊಟ್ಟಿದ್ದು, ಅದಕ್ಕೆ ಕೆಲವು ಉತ್ತರಗಳನ್ನೂ ಕೊಟ್ಟಿದ್ದಾರೆ, ಸಮಜಾಯಿಷಿ ಕೊಟ್ಟಿದ್ದಾರೆ. ಕೆಲವು ಅಧಿಕಾರಿಗಳು 1992ನೇ ಇಸವಿಯಲ್ಲಿ ಆ ಸೈಟುಗಳನ್ನು ಪಡೆಯಂವಾಗ ಸರ್ಕಾರಕ್ಕೆ ಬರೆದಿದ್ದಾರೆ. ಸರ್ಕಾರದ ಅನುಮತಿಯನ್ನು ಪಡೆದಿದ್ದಾರೆ. ಅನಂತರ ಸೈಟನ್ನು ತೆಗೆದುಕೊಂಡಮೇಲೆ, ಅದನ್ನು ತಮ್ಮ ಆಸೆಟ್ಸ್ ಅಂಡ್ ಲೈಯಾಬಿಲಿಟೀಸ್ ಸ್ಟೇಟ್‌ಮೆಂಟ್‌ನಲ್ಲಿ ಅಳವಡಿಸಿಕೊಂಡಿದ್ದಾರೆ. ಆದ್ದರಿಂದ ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು, ಒಟ್ಟು ಈ ಸುತ್ತೋಲೆಯ ಸ್ಪಿರಿಟ್ ಏನಿದೆ, ಆ ಸ್ಪಿರಿಟನ್ನು ಜಾರಿಗೆ ತರುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಸಭಾಧ್ಯಕ್ಷರೇ, ಬೇರೆ ಬೇರೆ ಸಂಘ ಸಂಸ್ಥೆಗಳಿಂದ ಸೈಟನ್ನು ಪಡೆಯಬಹುದು, ಬಿ.ಡಿ.ಎ. ನಿಂದ ಪಡೆಯಬಹುದು ಮತ್ತು ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿಕೊಂಡಿದ್ದಾರೆ, ಅವುಗಳಿಂದಲೂ ಪಡೆಯಬಹುದು. ಈಗಾಗಲೇ ಯಾರು ಯಾರು ಎರಡೆರಡನ್ನು ಪಡೆದಿದ್ದಾರೆ, ಯಾರು ಯಾರು ವಾಪಸ್ ಕೊಟ್ಟಿದ್ದಾರೆಂಬುದನ್ನು ಹೇಳಿದ್ದಾರೆ. ಈಗಾಗಲೇ ಮಾನ್ಯ ಸಂಪಂಗಿಯವರು ಹೇಳಿದ ಹಾಗೆ ಬಿ.ಡಿ.ಎ.ನಿಂದ ಸೈಟ್ ತೆಗೆದುಕೊಳ್ಳಬೇಕಾದರೆ ಒಂದು ಅಫಿಡವಿಟ್‌ನ್ನು ಕೊಡಬೇಕಾಗುತ್ತದೆ. ನಾನು ಬೆಂಗಳೂರು ನಗರದಲ್ಲಿ ಬೇರೆ ಯಾವುದೇ ಸಂಘ ಸಂಸ್ಥೆಗಳಿಂದ ಸೈಟನ್ನು ಹೊಂದಿಲ್ಲವೆನ್ನತಕ್ಕ ಪ್ರಮಾಣ ಪತ್ರವನ್ನು ಕೊಡಲೇಬೇಕು. ಆ ರೀತಿ ಕೊಟ್ಟಿದ್ದು ಮತ್ತೆ ತೆಗೆದುಕೊಂಡಿದ್ದರೆ ಅಂತಹವರ ಬಗ್ಗೆ ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳುತ್ತೀರಾ ಮತ್ತು ಸುಳ್ಳು ಪ್ರಮಾಣ ಪತ್ರವನ್ನು ಕೊಟ್ಟು ಬೇರೆ ಕಡೆ ತೆಗೆದುಕೊಂಡಿದ್ದರೆ, ಅಂತಹವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಎಸ್.ಎಂ.ಕೃಷ್ಣ: ಯಾರು ಸುಳ್ಳು ಪ್ರಮಾಣ ಪತ್ರಗಳನ್ನು ಕೊಟ್ಟು ನಿವೇಶನಗಳನ್ನು ಪಡೆದಿದ್ದಾರೆ, ಅಂಥಾದ್ದರ ಬಗ್ಗೆ ಸ್ಪೆಸಿಫಿಕ್ ಕಂಪ್ಲೇಂಟ್ಸ್‌ನ್ನು ಸರ್ಕಾರದ ಗಮನಕ್ಕೆ ತಂದರೆ, ಅವರ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಏಕೆಂದರೆ, ನಮ್ಮ ನೀತಿ ಸಂಹಿತೆಯ ಆಧಾರದಲ್ಲಿ ಯಾವ ಸರ್ಕಾರಿ ಅಧಿಕಾರಿಯೂ ಕೂಡ ಸುಳ್ಳು ಪ್ರಮಾಣ ಪತ್ರವನ್ನು ಕೊಡುವಂತಿಲ್ಲ, ಅದು ಕಾನೂನುಬಾಹಿರ. ಅದು ಯಾವುದೇ ವಿಚಾರಕ್ಕಾಗಲೀ, ನಿವೇಶನ ಇರಲಿ, ಮನೆ ಇರಲಿ ಅಥವಾ ಮತ್ತೊಂದಿರಲಿ, ಅವರ ಮೇಲೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. 1999ನೇ ಇಸವಿ ನವೆಂಬರ್ ತಿಂಗಳಿನಲ್ಲಿ ನಾವು ಹೊರಡಿಸಿರತಕ್ಕ ಸುತ್ತೋಲೆ ಏನಿದೆ, ಅದರ ಸ್ಪಿರಿಟ್‌ನ್ನು ನಾವು ಗಮನದಲ್ಲಿಟ್ಟುಕೊಂಡು, ಅದನ್ನು ಇನ್ನೂ ಹೆಚ್ಚು ಹರಿತವಾಗಿ ಮಾಡುವುದಕ್ಕೆ ನಾವು

ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ.ಎಸ್.ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೇ, ಅನೇಕ ಐ.ಎ.ಎಸ್. ಮತ್ತು ಐ.ಪಿ.ಎಸ್. ಆಫೀಸರ್ಸ್ ಲಿಸ್ಟ್ ಕೊಟ್ಟಿದ್ದೀರಿ. ಇನ್ನು ಯಾರಾದರೂ ಸೈಟುಗಳನ್ನೇ ಪಡೆಯದೇ ಇರತಕ್ಕಂಥವರು ಇದ್ದಾರೆಯೇ? ಇಲ್ಲಿ ನೀವು ಸೈಟುಗಳನ್ನು ಪಡೆದಿರುವವರ ಪಟ್ಟಿಯನ್ನು ಮಾತ್ರ ಕೊಟ್ಟಿದ್ದೀರಿ. ಎರಡನೆಯದು, ಅಫಿಡೆವಿಟ್ ಹಾಕಬೇಕು. That they are not in possession of any site. Whether they have filed the affidavits, while possessing one more site in Bangalore City. Otherwise, this will become fence-eating-the field.

ಶ್ರೀ ಎಸ್.ಎಂ.ಕೃಷ್ಣ: ಪ್ರಶ್ನೆ ಒಂದಕ್ಕಿಂತ ಹೆಚ್ಚು ನಿವೇಶನಗಳಿವೆಯೇ ಎಂಬುದಕ್ಕೆ ಉತ್ತರ ಕೊಟ್ಟಿದ್ದೇನೆ. ನೋಟೀಸ್ ನೀಡಿದ ನಂತರವೂ ಸಂಬಂಧಪಟ್ಟ ಅಧಿಕಾರಿಗಳು ಉತ್ತರ ನೀಡದೇ ಇರುವುದು ನಿಜವೆ, ಎಂಬುದಕ್ಕೂ ಉತ್ತರ ಕೊಟ್ಟಿದ್ದೇನೆ. ಆದ್ದರಿಂದ, ಮಾನ್ಯ ಸದಸ್ಯರು ಯಾವ ಯಾವ ಪ್ರಶ್ನೆಗಳನ್ನು ಕೇಳಿದ್ದಾರೋ ಅದಕ್ಕೆ ಉತ್ತರಗಳನ್ನು ಮಾಹಿತಿಗಳ ಮೂಲಕ ಒದಗಿಸಿಕೊಟ್ಟಿದ್ದೇವೆ. ಉದ್ಭವವಾಗಿರತಕ್ಕಂಥ ಉಪ ಪ್ರಶ್ನೆಗಳಿಗೂ ಕೂಡ ಶಕ್ತ್ಯಾನುಸಾರ ಉತ್ತರವನ್ನು ಕೊಡುವುದಕ್ಕೆ ಪ್ರಯತ್ನವನ್ನು ಮಾಡಿದ್ದೇನೆ.

ಅಧಿಕಾರಿಗಳು ಜನಪ್ರತಿನಿಧಿಗಳ ಜೊತೆಯಲ್ಲಿ ಅನುಚಿತವಾಗಿ ವರ್ತಿಸುವುದರ ಬಗ್ಗೆ ಕ್ರಮ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 90(1292)

**ಸದಸ್ಯರ ಹೆಸರು: ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ)**

## ಪ್ರಶ್ನೆ

ಅ) ಕಳೆದ ಎರಡು ವರ್ಷಗಳಿಂದೀಚೆಗೆ ಜನ ಪ್ರತಿನಿಧಿಗಳ ಜೊತೆ ಅನುಚಿತವಾಗಿ ವರ್ತಿಸಿರುವ ಬಗ್ಗೆ ದೂರು ನೀಡಿರುವವರು ಯಾರ್ಯಾರು?

ಆ) ಸದರಿ ದೂರುಗಳ ಬಗ್ಗೆ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ?

ಇ) ಶಾಸಕರುಗಳ ಜೊತೆ ಅಧಿಕಾರಿಗಳು ಹೇಗೆ ವರ್ತಿಸಬೇಕೆಂಬ ಬಗ್ಗೆ ಸರ್ಕಾರದ ನೀತಿ ಸಂಹಿತೆಯನ್ನು ರಾಜ್ಯದಾದ್ಯಂತ ಎಲ್ಲಾ ಅಧಿಕಾರಿಗಳಿಗೆ ತಿಳಿಸುವ ಬಗ್ಗೆ ಸರ್ಕಾರದ ನಿಲುವೇನು?

ಈ) ಶಾಸಕರುಗಳು ಇಲಾಖೆಗಳಿಗೆ ನೀಡುವ ಎಲ್ಲಾ ಪತ್ರಗಳಿಗೂ ಹಿಂಬರಹ ನೀಡುವಂತೆ ಎಲ್ಲಾ ಅಧಿಕಾರಿಗಳಿಗೆ ತಿಳಿಸುವ ಬಗ್ಗೆ ಸರ್ಕಾರದ ನಿರುವೇನು?